ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ವಿಧಾನ ಸೌಧದ ದುರಸ್ತಿಗಾಗಿ ಇಲ್ಲಿ ಪ್ರಶ್ನೆ ಬಂದಿದೆ. ವಿಧಾನ ಸೌಧವನ್ನು ಕಟ್ಟಿ ಸುಮಾರು ೩೫ ವರ್ಷ ಆಯಿತು. ೧೯೫೬ನೇ ಇಸವಿಯಲ್ಲಿ ಇದನ್ನು ಕಟ್ಟಲಾಯಿತಂ ಹೋದ ವರ್ಷ ಬಾಂಬ್ ಸ್ಕೇರ್ ಆಗಿ ಪೋಲೀಸ್ ನಾಯಿಗಳೆಲ್ಲೂ ಬಂದಿತ್ತು. ಈ ರೀತಿ ಇದನ್ನು ಕಟ್ಟಿ ಮೂವತ್ತು ವರ್ಷ ಆಗಿರುವುದರಿಂದ ಕಟ್ಟಡವು ಭದ್ರವಾಗಿ ಇರುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಬಾಂಬ್ ಸ್ಕೇರ್ ಬಗ್ಗೆ ಏನು ಮಾಡುತ್ತಾರೆ. ಪಾರ್ಲಿಮೆಂಟಿನಲ್ಲಿ ಭವನದ ಮೇಲೆಲ್ಲಾ ಪೋಲೀಸರು ಗನ್‌ಗಳನ್ನು ಹಿಡಿದುಕೊಂಡು ಓಡಾಡುತ್ತಿರುತ್ತಾರೆ ಲೆಜಿಸ್ಲೇಟಿವ್ ಅಸೆಂಬ್ಲಿ ನಡೆಯುವಾಗ ಕಾಲದಲ್ಲಿ ಆ ರೀತಿ ಏನಾದರೂ ಭದ್ರತೆ ಏರ್ಪಾಡು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಕೆಲಸ ಪಿ.ಡಬ್ಲ್ಯು.ಡಿ ಇಲಾಖೆಯದು ಅಲ್ಲ ಆದರೂ ಒಳ್ಳೆಯ ಸಲಹೆಯನ್ನು ಕೊಟ್ಟಿರುತ್ತಾರೆ ಅದನ್ನು ಸಂಬಂಧಪಟ್ಟ ಖಾತೆಯವರಿಗೆ ತಿಳಿಸುತ್ತೇನೆ.

ಪ್ರಶ್ನೆ ಸಂಖ್ಯೆ.—೧೫೯ (೫೮೫) (ಸದಸ್ಯರು ಗೈರು ಹಾಜರಿ)

ಪ್ರಶ್ನೆ ಸಂಖ್ಯೆ ೧೬೦ (೨೦೮)

ಅಧ್ಯಕ್ಷರು.—ಮಾನ್ಯ ನಾಡಗೌಡರ ಪ್ರಶ್ನೆ ಬೇರೆ ಇಲಾಖೆಗೆ ವರ್ಗಾವಣೆ ಆಗಿದೆ.

ನೀರಾವರಿ ರಸ್ತೆಗಳ ದುರಸ್ತಿಯ ಬಗ್ಗೆ

೫೭೭. ಕರಿಯಣ್ಣ (ಹೊಳೆಹೊನ್ನೂರ್).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ನೀರಾವರಿ ಪ್ರದೇಶದಲ್ಲಿರುವ ರಸ್ತೆಗಳು ಈಗ ಕೊಡುತ್ತಿರುವ ಏಕರೆವಾರು ಅಧಾರದ ಮೇಲಿನ ಹಣದಿಂದ ದುರಸ್ತಿ ಆಗದೆ ಹಾಳಾಗಿರುತ್ತವೆ ಹಾಗಿದ್ದಲ್ಲಿ ಈ ನೀರಾವರಿ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ಏನು ಯೋಜನೆ ಕೈಗೊಳ್ಳಲಾಗಿದೆ ?

ಆ) ಈ ರಸ್ತೆಗಳ ಅಭಿವೃದ್ಧಿಗೆ ಯಾವುದಾದರೂ ಯೋಜನೆ ಕೈಗೊಳ್ಳಲಾಗಿದೆಯೇ ಹಾಗಿದ್ದಲ್ಲಿ ರಸ್ತೆಗಳ ದುರಸ್ತಿಗೆ ಏಕರೆವಾರು ಎಷ್ಟು ಹಣ ಹೆಚ್ಚಿಗೆ ನೀಡಲಾಗುವುದು ?

ಇ) ಹಾಗಿಲ್ಲದಿದ್ದಲ್ಲಿ ಯಾವುದಾದರೂ ವಿಶೇಷ ಯೋಜನೆ ಮೇರೆಗೆ ಹಣ ನೀಡಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).

ಅ) ಅಚ್ಚುಕಟ್ಟು ರಸ್ತೆಗಳಿಗೆ ಕಿ.ಮೀ. ಆಧಾರದ ಮೇಲೆ ನಿರ್ವಹಣಾ ಅನುದಾನ ನೀಡಲಾಗುತ್ತಿದ್ದು ಭದ್ರಾವತಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಅಚ್ಚುಕಟ್ಟು ರಸ್ತೆಗಳಿಗೆ ವಾರ್ಷಿಕವಾಗಿ ೧೨ ೫ ಲಕ್ಷ ರೂಗಳ ಅನುದಾನ ಒದಗಿಸಲಾಗಿದೆ. ಅನುದಾನಕ್ಕನುಗುಣವಾಗಿ ದುರಸ್ತಿ ಕೆಲಸಗಳನ್ನು ಕೈಗೊಳ್ಳಲಾಗುವುದು

ಆ) ಇಲ್ಲ ಪುನರ್ಗೋಲಿನಲ್ಲಿ ಹೆಚ್ಚಳ ಮಾಡುವ ಪ್ರಸ್ತಾವೆಯಿರುವುದಿಲ್ಲ.

ಇ) ಪರಿಶೀಲನೆಯಲ್ಲಿರುವುದಿಲ್ಲ.

ಶ್ರೀ ಕರಿಯಣ್ಣ — ಮಾನ್ಯ ಅಧ್ಯಕ್ಷರೇ, ನಮ್ಮ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ಸುಮಾರು ೬೦ ಸಾವಿರ ಎಕರೆ ನೀರಾವರಿ ಜಮೀನು ಇದ್ದು, ಇದರ ಸುತ್ತ ಇರಿಗೇಷನ್ ಜಮೀನಂ ಇದೆ. ಆದಕ್ಕೆ ಯಾವ ಕಾಲದಲ್ಲಿ ಅಂದರೆ ಎಷ್ಟನೇ ಇಸವಿಯೊಳಗೆ ನೀವು ರಸ್ತೆ ರಿಪೇರಿಗಾಗಿ ಎಷ್ಟು ಹೆಣವನ್ನು ಕೊಟ್ಟಿದ್ದೀರಿ. ಅಂದರೆ ಒಂದು ಕಿಲೋಮೀಟರ್‌ಗೆ ಎಷ್ಟು ಹಣ ನಿಗದಿ ಮಾಡಿದೀರಿ ಎಂದು ತಮ್ಮ ಮುಖಾಂತರ ಕೇಳಲು ಇಷ್ಟಪಡುತ್ತೇನೆ, ಮಾನ್ಯ ಸಚಿವರು ಇದರ ಬಗ್ಗೆ ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಅಧ್ಯಕ್ಷರೇ, ಸರ್ಕಾರದ ಪ್ರಸ್ತುತ ನಿಯಮದಂತೆ ಒಂದು ಕಿಲೋಮೀಟರ್‌ಗೆ ೩ರಿಂದ ೪ ಸಹಸ್ರ ರೂಪಾಯಿ ಬರುವಂತಹ ರೀತಿಯಲ್ಲಿ ಹಣವನ್ನು ಅನುದಾನ ರೂಪದಲ್ಲಿ ಕೊಡುತ್ತಿದ್ದಾರೆ. ಆದರೆ ಇದರಲ್ಲಿ ಸುಮಾರು ೪೦-೪೫ ಪರ್ಸೆಂಟ್ ಹಣ ಅಲ್ಲಿನ ಕೆಲಸಗಾರರು ಯಾರು ಇದ್ದಾರೆ, ಅಂದರೆ ಡೈಲಿ ವೇಜಸ್‌ನಲ್ಲಿ ಕೆಲಸ ಮಾಡುವವರಿಗೆ ವಿಚ್ರ್ ಆಗುತ್ತಾ ಇರುವುದರಿಂದ ನ್ಯಾಯವಾಗಿ ಒಂದು ಕಿಲೋ ಮೀಟರ್‌ಗೆ ಖರ್ಚು ಆಗುತ್ತಿರುವುದು ಒಂದೂವರೆ ಸಾವಿರದಿಂದ ಎರಡು ಸಾವಿರದವರೆಗೆ ಮಾತ್ರ. ಈಗ ಕೊಡುತ್ತಾ ಇರುವ ಹಣ ಏನೇನು ಸಾಲದು ಎಂಬುದನ್ನು ನಾನಂಕೂಡ ಒಪ್ಪಿಕೊಳ್ಳಲಂ ಇಷ್ಟಪಡುತ್ತೇನೆ. ಈಗ ಕೊಟ್ಟಿರತಕ್ಕಂಥ ಹಣದಲ್ಲಿ ಎಲ್ಲೆಲ್ಲಿ ತೀರ ಅವ್ಯವಸ್ಥೆ

ಯಾಗಿದೆ ಅಂತಹ ಕಡೆ ಸ್ವಲ್ಪ ಮಟ್ಟಿಗೆ ರಿಪೇರಿ ಮಾಡಲಿಕ್ಕೆ ಸಾಧ್ಯವಿದೆಯೇ ಹೊರತು ಅಲ್ಲಿರತಕ್ಕಂಥ ಎಲ್ಲ ರಸ್ತೆಗಳನ್ನು ನಾವು ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ತಿಳಿಸುತ್ತೇನೆ. ಇವತ್ತು ಭದ್ರಾವತಿ ತಾಲ್ಲೂಕಿನಲ್ಲಿ ಸುಮಾರು ೧೨೩ ರಸ್ತೆಗಳಿದ್ದು, ಕಳೆದ ಸಾರಿ ಹನ್ನೆರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಆದರೆ ನಾವು ೧೫.೭೫ ಖರ್ಚು ಮಾಡಿದ್ದೇವೆ. ಎಲ್ಲೆಲ್ಲಿ ದುಸ್ಥಿತಿಯಲ್ಲಿದೆ ಅದನ್ನು ಸರಿಪಡಿಸತಕ್ಕಂಥ ಕೆಲಸ ನಡೆದಿದೆ. ಈಗ ಸಂಬಂಧಪಟ್ಟ ಚೀಫ್ ಇಂಜಿನಿಯರ್ ಕೂಡ ದುರಸ್ಥಿಯಾಗಬೇಕಾದಂಥ ಜಾಗಗಳನ್ನು ಗುರುತು ಮಾಡಿ ಅವುಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಈಗಾಗಲೇ ಸೂಚನೆ ಕೂಡ ನಾವು ಕಳಿಸಿಕೊಟ್ಟಿದ್ದೇವೆ.

ಶ್ರೀ ಕರಿಯಣ್ಣ.— ಮಾನ್ಯ ಅಧ್ಯಕ್ಷರೆ, ಭದ್ರಾವತಿ ತಾಲ್ಲೂಕಿನಲ್ಲಿ ಸುಮಾರು ೩೦ ಎಕರೆ ಪ್ರದೇಶದಲ್ಲಿ ಕಬ್ಬು ಬೆಳೆಯುತ್ತಾರೆ. ಈ ಕಬ್ಬು ಬೆಳೆಯತಕ್ಕ ಪ್ರದೇಶದಲ್ಲಿ ಶುಗರ್‌ಕೇನ್ ಸೆಸ್ ಎಂದು ಹಿಂದೆ ಕಲೆಕ್ಟ್ ಮಾಡುತ್ತಾ ಇದ್ದರು. ಅದನ್ನು ನಿಲ್ಲಿಸಿ ಈಗ ಶುಗರ್ ಸೆಸ್ ಎಂದು ಬೇರೆ ಯಾವುದೋ ಕಲೆಕ್ಟ್ ಮಾಡುತ್ತಾ ಇದ್ದಾರೆ. ಅದನ್ನು ಕೂಡ ರಸ್ತೆ ರಿಪೇರಿಗೆ ಕೊಡದೇ ಹೋದರೆ ರಸ್ತೆಗಳ ಅಭಿವೃದ್ಧಿಯಾಗುವುದಿಲ್ಲ. ಅಲ್ಲಿನ ಉತ್ಪತ್ತಿಯಿಂದ ರಸ್ತೆಗಳ ಅಭಿವೃದ್ಧಿ ಮಾಡುತ್ತಾ ಇಲ್ಲ. ನಾನು ಯಾವ ಸಾಲಿನಲ್ಲಿ ೪ ಸಾವಿರ ರೂಪಾಯಿ ಎಂದು ನಿಗದಿ ಮಾಡಿದ್ದೀರಿ ಎಂದು ಕೇಳಿದೆ. ಈಗಾಗಲೇ ಕೂಲಿ ರೇಟ್, ಮಿನರಲ್ ರೇಟ್ ಹೆಚ್ಚಾಗಿರುವುದರಿಂದ ೧೦ ವರ್ಷಗಳ ಹಿಂದೆ ನಿಗದಿ ಮಾಡಿರುವಂಥಾದ್ದನ್ನು ಈ ವರ್ಷವೂ ಕೊಟ್ಟರೆ ಆಗುವುದಿಲ್ಲ. ಅಲ್ಲೆಲ್ಲಾ ರಸ್ತೆ ಹಾಳಾಗಿದೆ. ಆದುದರಿಂದ ಇದಕ್ಕೆ ಏನಾದರೂ ವಿಶೇಷವಾಗಿ ಶುಗರ್‌ಕೇಸ್‌ನಿಂದ ಬರತಕ್ಕಂಥ ಹಣದಿಂದ ಕೊಡುತ್ತೀರ ಎಂದು ನಾನು ತಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಈ ಒಂದು ಬೇಡಿಕೆ ರಾಜ್ಯದ ಅನೇಕ ಭಾಗಗಳಿಂದ ಬರುತ್ತಿದೆ. ಶುಗರ್‌ಫ್ಯಾಕ್ಟರಿ ಏರಿಯಾದಲ್ಲಿರತಕ್ಕಂಥಾವರು ನಮ್ಮಿಂದ ಪರ್ಚೇಸ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿದ್ದೀರಿ, ಆ ರಸ್ತೆಗಳನ್ನು ಆ ಹಣದಿಂದ ಸುವ್ಯವಸ್ಥೆಯಲ್ಲಿ ಇಡತಕ್ಕಂಥ ಪ್ರಯತ್ನ ಮಾಡಬೇಕು ಎನ್ನತಕ್ಕಂಥ ಒತ್ತಾಯ ಬರುತ್ತಾ ಇದೆ. ಈ ಕಡೆ ಗಮನ ಹರಿಸತಕ್ಕಂಥಾದ್ದು ಅಗತ್ಯ ಎನ್ನುವುದನ್ನು ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ. ಈ ದಿಶೆಯಲ್ಲಿ ಶೀಘ್ರದಲ್ಲಿ ಒಂದು ತೀರ್ಮಾನ ತೆಗೆದುಕೊಂಡು ಆ ಶುಗರ್ ಫ್ಯಾಕ್ಟರಿ ಏರಿಯಾದಲ್ಲಿ ಬರತಕ್ಕಂಥ ರಸ್ತೆಗಳನ್ನು ಆ ಹಣದಲ್ಲಿ ರಿಪೇರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.— ಈಗ ೩೨೦ನೇ ಪ್ರಶ್ನೆಯನ್ನು ವಿರೋಧ ಪಕ್ಷದ ನಾಯಕರ ಪರವಾಗಿ ಶ್ರೀ ಸಿಂಧ್ಯ ಅವರು ಕೇಳಬಹುದು.

ಕೃಷ್ಣಾ ಮೇಲ್ದಂಡೆ ಯೋಜನೆ

೧೬೨. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಪಲ್ಲಿ),— ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಕಾರ್ಯ ಯಾವ ಹಂತದಲ್ಲಿದೆ?

ಆ) ಸದರೀ ಯೋಜನೆಯನ್ನು ಈ ಹಿಂದೆಯೇ ಪೂರೈಸುವ ಭರವಸೆಯನ್ನು ನೀಡಲಾಗಿತ್ತಲ್ಲವೇ?

ಇ) ಪೂರೈಸದೇ ಇರುವುದಕ್ಕೆ ಕಾರಣಗಳೇನು?

ಈ) ಈ ವಿಳಂಬಕ್ಕೆ ನಿರ್ದಿಷ್ಟ ಕಾರಣವೇ, ಹಾಗಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಉ) ಆಗಿಲ್ಲದಿದ್ದರೆ ಕಾರಣಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ಬಸವಸಾಗರ (ನಾರಾಯಣಪುರ) ಅಣೆಕಟ್ಟು ಪೂರ್ಣಗೊಂಡಿದ್ದು ಆಲಮಟ್ಟಿ ಅಣೆಕಟ್ಟಿನ ಸ್ಪಿಲವೇಯನ್ನು ೫೦೦ ಮೀಟರ್ ಮಟ್ಟಿದಪರೆಗೆ ಕಟ್ಟಲಾಗಿದೆ. ಅಣೆಕಟ್ಟನ್ನು ಏರಿಸುವ ಬಗ್ಗೆ ಸಿದ್ಧತೆಗಳು ನಡೆದಿವೆ. ನಾರಾಯಣಪುರ ಎಡದಂಡೆ ಕಾಲುವೆ ಕೆಲಸ ಪೂರ್ಣಗೊಂಡಿದ್ದು, ಶಹಾಪುರ ಉಪ ಕಾಲುವೆಯ ಕಾಮಗಾರಿಗಳು ಅದರ ಮೊದಲ ೯ ವಿತರಣಾ ನಾಲೆಗಳ ಸಹಿತ, ಬಹುತೇಕ ಪೂರ್ಣಗೊಂಡಿದೆ. ಮುಂದಿನ ವಿತರಣಾ ನಾಲೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮುಂದ್ಯಾಳ